

## ಗ್ಯಾಸ್ ಇಸ್ತ್ರಿಪೆಟ್ಟಿಗೆ

ಗ್ಯಾಸ್ ಅನ್ನು ಅಡುಗೆ ಮಾಡಲು, ಸ್ನಾನಕ್ಕೆ ನೀರು ಕಾಯಿಸಲು, ವಾಹನ ಚಲಾಯಿಸಲಷ್ಟೇ ಬಳಕೆ ಮಾಡಲಾಗುತ್ತೆ ಎಂದು ನಾವು ತಿಳಿದಿದ್ದೇವೆ. ಆದರೆ, ಈ ಚಿತ್ರದಲ್ಲಿರುವ ವ್ಯಕ್ತಿ ಬಟ್ಟೆಗಳನ್ನು ಇಸ್ತ್ರಿ ಮಾಡಲು ಗ್ಯಾಸ್ ಇಸ್ತ್ರಿಪೆಟ್ಟಿಗೆ ಬಳಸಿರುವುದು ವಿಶೇಷವಾಗಿದೆ. ಬೆಂಗಳೂರಿನ ರಾಜಾಜಿನಗರದ ಗಾಯತ್ರಿನಗರದಲ್ಲಿರುವ ನಾಯಕ್ ಆಸ್ಪತ್ರೆಯ ಎದುರಲ್ಲಿ ತಳ್ಳುವ ಬಂಡಿಯನ್ನು ನಿಲ್ಲಿಸಿಕೊಂಡು ನಾಗರಾಜ್ ಎಂಬುವವರು ಇಸ್ತ್ರಿ ಮಾಡುತ್ತಾರೆ. ಇವರು ಎಲ್ಲರಂತೆ ಇದ್ದಲಿನ ಇಸ್ತ್ರಿಪೆಟ್ಟಿಗೆ ಅಥವಾ ವಿದ್ಯುತ್ ಇಸ್ತ್ರಿಪೆಟ್ಟಿಗೆಯನ್ನು ತಮ್ಮ ಕಾಯಕಕ್ಕೆ ಬಳಸುವುದಿಲ್ಲ. ಗ್ಯಾಸ್‌ನಿಂದ ಬಳಸುವ ಇಸ್ತ್ರಿಪೆಟ್ಟಿಗೆ ಮೂಲಕ ಬಟ್ಟೆಗಳನ್ನು ಇಸ್ತ್ರಿ ಮಾಡಿಕೊಡುತ್ತಾರೆ.

ಮೊದಲಾದರೆ ಇದ್ದಿಲನ್ನು ಹುಡುಕಿ ತಂದು, ಬೆಂಕಿ ಕೊಟ್ಟು ಗಾಳಿ ಹಾಕುತ್ತಾ ಬಿಸಿ ಕೆಂಡ ಮಾಡಿ ಇಸ್ತ್ರಿ ಮಾಡಬೇಕಾಗುತ್ತಿತ್ತು. ಗಾಳಿ ಹಾಕುವಾಗ ಹೊಗೆಯಿಂದಾಗಿ ಆಗಾಗ ಕೆಮ್ಮು ಬರುತ್ತಿತ್ತು. ಇಸ್ತ್ರಿಪೆಟ್ಟಿಗೆ ತಣ್ಣಗಾದಾಗ ಮತ್ತೆ ಅದನ್ನೇ ಪುನರಾವರ್ತನೆ ಮಾಡಬೇಕಾಗಿತ್ತು. ಅದೇ ಜಾಗದಲ್ಲಿ ಗ್ಯಾಸ್ ಇಸ್ತ್ರಿಪೆಟ್ಟಿಗೆ ಇದ್ದರೆ ಗ್ಯಾಸ್ ಖಾಲಿಯಾದಲ್ಲಿ ಸುಲಭವಾಗಿ ಮತ್ತೊಂದು ಸಿಲಿಂಡರ್ ಬದಲಿಸಿಕೊಳ್ಳಬಹುದು. ಬೇರೆ ವಿಧಾನಕ್ಕಿಂತ ಇದು ಸುಲಭ ಎನ್ನುವುದೂ ನಾಗರಾಜ್ ಅಭಿಪ್ರಾಯ.

–ಬಿ.ಎನ್. ಭರತ್, ಬೆಂಗಳೂರು

## ಕೆಪ್ಪಜೋಗಕ್ಕೆ ಕಾಮನಬಿಲ್ಲಿನ ಪುಳಕ!

ಉತ್ತರಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕಿನ ಉಂಚಳ್ಳಿ ಜಲಪಾತಕ್ಕೆ ಭೇಟಿ ನೀಡಿದಾಗ ಮಳೆ ಬಿಸಿಲಿನ ಸಮ್ಮಿಲನದಿಂದ ಆಗಸದಲ್ಲಿ ಮೂಡಿದ ಕಾಮನಬಿಲ್ಲು ಅಭೂತಪೂರ್ವವಾಗಿ ಕಂಡಿತು. ಸ್ವಲ್ಪ ಹೊತ್ತಿನಲ್ಲಿ ಮೋಡದ ನಡುವೆ ಇಡೀ ಜಲಪಾತ ಅಗೋಚರವಾಗಿ ಆಶ್ಚರ್ಯವಾಯಿತು. ಶಿರಸಿಯಿಂದ 36 ಕಿ.ಮೀ. ದೂರವಿರುವ ಉಂಚಳ್ಳಿ ಜಲಪಾತ, 116 ಮೀಟರ್ ಅಡಿಯಿಂದ ಧುಮುಕುವ ಅಘನಾಶಿನಿ ನದಿಯ ಭಾಗವಾಗಿದೆ. ಇದು ಉಂಟು ಮಾಡುವ ವಿಶಿಷ್ಟ ಶಬ್ದದಿಂದಾಗಿ ಇದಕ್ಕೆ 'ಕೆಪ್ಪಜೋಗ' ಎನ್ನುವ ಅಡ್ಡಹೆಸರೂ ಇದೆ. ಈ ಪ್ರಾಂತ್ಯದಲ್ಲಿ ಜಿಲ್ಲಾಧಿಕಾರಿಯಾಗಿದ್ದ ಜೆ.ಡಿ. ಲುಸಿಂಗ್‌ಟನ್ ಎನ್ನುವಾತ ಇದನ್ನು ಅನ್ವೇಷಿಸಿದ ಎಂದು ಇತಿಹಾಸಕಾರರು ದಾಖಲಿಸಿದ್ದಾರೆ. ಈ ಕಾರಣದಿಂದಾಗಿ ಈ ಜಲಪಾತವನ್ನು ಲುಸಿಂಗ್‌ಟನ್ ಜಲಪಾತ ಅಂತಲೂ ಕರೆಯುವುದುಂಟು. ಕಪ್ಪು ಬಂಡೆಗಳ ಮೇಲೆ ವೈಯಾರವಾಗಿ ಹರಿಯುವ ಜಲಪಾತ ಇಲ್ಲಿ ಚೆಲುವಿನ ಚಿತ್ತಾರವನ್ನೇ ಬರೆಯುತ್ತದೆ. ಮಳೆಗಾಲದಲ್ಲಿ ಜಿಗಣೆಗಳ ಕಾಟ ಹೆಚ್ಚಿರುತ್ತದೆ. ಇದಲ್ಲದೆ ಜೋರಾಗಿ ಮಳೆ ಬಂದರೆ ಮೋಡದ ರಾಶಿಯಲ್ಲಿ ಜಲಪಾತ ಮರೆಯಾಗಿ ಸದ್ದು ಮಾತ್ರ ಕೇಳಿಸುತ್ತದೆ. ಸ್ವಂತ ವಾಹನದ ಜೊತೆಗೆ ಇಲ್ಲಿಗೆ ಬರುವುದು ಪ್ರವಾಸಿಗರಿಗೆ ಹೆಚ್ಚು ಸೂಕ್ತ.

–ಅರುಣ್ ಕಿಲ್ಲೂರು



## ಬಾವಿಗೂ ಅಮೃತೋತ್ಸವ!

ಚಿತ್ರದಲ್ಲಿ ಕಾಣುತ್ತಿರುವುದು ಕಲ್ಲಿನಿಂದ ಕಟ್ಟಿದ ಬಾವಿ. ಅದರ ಮುಂದೆ ನಿಂತವರು ಹೊಸನಗರದ ಎಸ್.ಎನ್. ರಸ್ತೆ ನಿವಾಸಿ ಕೆ.ಜಿ. ನಾಗೇಶ್ ರಾವ್ (85 ವರ್ಷ) ಮತ್ತು ಪತ್ನಿ ಲಕ್ಷ್ಮೀದೇವಿ (80 ವರ್ಷ) ಎಂಬ ಹಿರಿಯ ದಂಪತಿ. ಕೈಯಲ್ಲಿ ಬಾವುಟ ಹಿಡಿದು ಸ್ವಾತಂತ್ರ್ಯ ದಿನದ ಅಮೃತಮಹೋತ್ಸವ ಆಚರಿಸಿದರು.

ಅಷ್ಟಕ್ಕೂ ಈ ದಂಪತಿ ಬಾವಿಯ ಮುಂದೆ ನಿಂತು ಅಮೃತಮಹೋತ್ಸವ ಆಚರಿಸಲು ಒಂದು ಕಾರಣವಿದೆ. 76 ವರ್ಷಗಳ ಹಿಂದೆ ನಿರ್ಮಿಸಿದ ಈ ಕಲ್ಲಿನ ಬಾವಿಯು ಕಳೆದ ವರ್ಷವಷ್ಟೇ ಅಮೃತ ಮಹೋತ್ಸವ ಪೂರೈಸಿದೆ. 1946ರ ಮೇ 1ರಂದು ನಿರ್ಮಿಸಿದ ಈ ಬಾವಿ ಅಂದಿನಿಂದ ಇಂದಿನವರೆಗೆ ಒಮ್ಮೆಯೂ ನೀರಿಲ್ಲದೆ ಬರಿದಾಗಿಲ್ಲ. ಈ ದಂಪತಿಗಷ್ಟೇ ಅಲ್ಲದೆ ಅಕ್ಕಪಕ್ಕ ಮನೆಯವರಿಗೂ ಶುದ್ಧ ನೀರುಣಿಸಿದೆ. ಕೊರೊನಾ ಕಾರಣಕ್ಕೆ ಕಳೆದ ವರ್ಷ ಇದರ ಅಮೃತ ಮಹೋತ್ಸವ ಆಚರಿಸಲಿಲ್ಲ. ಅದರ ನಿಮಿತ್ತ ಹಾಗೂ ಸ್ವಾತಂತ್ರ್ಯದಿನದ ಸಲುವಾಗಿ ಈ ಬಾರಿ ಬಾವಿಯ ಮುಂದೆ ನಿಂತು ಬಾವುಟ ಹಿಡಿದು ಆಚರಿಸಿದರು. ಅಲ್ಲದೆ, ತಮ್ಮ ವಠಾರದವರೊಂದಿಗೆ ನೆಲ, ಜಲ, ದೇಶ, ಭಾಷೆಯ ಮಹತ್ವ ಮತ್ತು ಆ ಸಂಬಂಧಿತ ಐತಿಹಾಸಿಕ ನೆನಪುಗಳನ್ನು ಮೆಲುಕು ಹಾಕಿ ಸಂಭ್ರಮಿಸಿದರು. ಹಿರಿಯರ ಅನುಭವದ ಮಾತು ನೆರೆದಿದ್ದವರಿಗೆ ಸ್ಫೂರ್ತಿಯಾಯಿತು.

–ನಗರ ಗುರುದೇವ್ ಭಂಡಾರ್ಕರ್, ಹೊಸನಗರ



## ಬಾಟಲ್ ರೂಮು

ನೀರು ಕುಡಿದು ಬಿಸಾಡುವ ಬಾಟಲ್‌ಗಳು ಮಂಗಳೂರಿನ ನಿರ್ಮಿತಿ ಕೇಂದ್ರದಲ್ಲಿ ರೂಮ್ ನಿರ್ಮಾಣದಲ್ಲಿ ತೊಡಗಿವೆ. ಬಾಟಲಿಯೊಳಗೆ ಮರಳು ತುಂಬಿಸಿ ಅವುಗಳನ್ನು ಜೋಡಿಸಿ ಪ್ರಾಯೋಗಿಕವಾಗಿ ರೂಮ್ ಒಂದನ್ನು ನಿರ್ಮಿಸಲಾಗಿದೆ. ಮಳೆ, ಚಳಿಗಾಲದಲ್ಲೂ ಹವಾನಿಯಂತ್ರಕಗಳ ಹಾಗೆ ಈ ಗೋಡೆಗಳು ಕೆಲಸ ಮಾಡುತ್ತವೆ. ಇದಕ್ಕೆ ತಗಲುವ ಖರ್ಚು ಕೂಡಾ ಕಡಿಮೆ. ಪ್ಲಾಸ್ಟಿಕ್ ಬಾಟಲ್‌ಗಳ ಮರುಬಳಕೆಯತ್ತ ಇದೊಂದು ಉತ್ತಮ ಪ್ರಯತ್ನವಾಗಿದೆ.

–ಚಂದ್ರಹಾಸ ಚಾರ್ಮಾಡಿ, ಬೆಳ್ತಂಗಡಿ